ಬೇಕೆ ಹೊರತು ನಾವು ಪಂಕ್ತಿ ಪುಕ್ಕಟೆಯಾಗಿ ಕೊಡುವುದಿಲ್ಲ. ಅಂಗಡಿಗಳಲ್ಲಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಹೆಚ್. ಯಂಕನಾಯ್ಕ.—ಅದೇ ಪುಸ್ತಕಗಳನ್ನು ತಾವು ಸಬ್ಸಿಡಿ ಮೇಲೆ ಕೊಟ್ಟರೆ, ಅವರು ತೆಗೆದುಕೊಳ್ಳುವುದಕ್ಕೆ ತಯಾರಿದ್ದಾರೆ.

ಶ್ರೀ ಎಂ. ರಘುಪತಿ.—ಇದಕ್ಕೆ ಸಬ್ಸಿಡಿ ಕೊಡುವುದಿಲ್ಲ. ಬೇಕಾದರೆ, ತಾಲ್ಲೂಕು ಸೊಸೈಟಿಗಳಲ್ಲಿ ಪುಸ್ತಕಗಳು ಎಷ್ಟು ಬೇಕೆಂದು ಇಂಡೆಂಟ್ ಮಾಡಿದರೆ, ಅಷ್ಟನ್ನು ಸೊಸೈಟಿಗೆ ಕೊಡುತ್ತೇವೆ. ಅವರು ದುಡ್ಡು ಕೊಟ್ಟು ಕೊಂಡುಕೊಳ್ಳಬಹುದು.

ಶ್ರೀ ಬಿ.ಹೆಚ್. ಯಂಕನಾಯ್ಕ.—ಬೇಕೆಂದು ಕೇಳುವವರು ಯಾರು ? ಸೊಸೈಟಿಗಳಿಗೆ ಕೊಡಿ. ಅದಕ್ಕೆ ಸಬ್ಸಿಡಿ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಸಬ್ಸಿಡಿ ಕೊಡುವುದಕ್ಕೆ ಸಾಧ್ಯವಿಲ್ಲ.

೧೮೮೦. ಶ್ರೀ ವೀರಯ್ಯ ಸ್ವಾಮಿ.—

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಒಬ್ಬ ಮಾನ್ಯ ಸದಸ್ಯರು.—ಶ್ರೀ ವೀರಯ್ಯ ಸ್ವಾಮಿಯವರ ಪರವಾಗಿ ನಾನೂ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ತಮಗೆ ಅಥಾರಿಟಿ ಲೆಟರ್ ಇದೆಯೇ

ಮಾನ್ಯ ಸದಸ್ಯರು.—ಇಲ್ಲ.

ಅಧ್ಯಕ್ಷರು.—ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ಈ ಪ್ರಶ್ನೆಯನ್ನು ತಾವೇ ಹಾಕಬಹುದು.

ಅಧ್ಯಕ್ಷರು.—ಈ ಸಂಪ್ರದಾಯ ಹಾಕುವುದು ಬೇಡ.

೧೮೮೦. ಶ್ರೀ ಕೆ. ವೆಂಕಟೇಶ್.—

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

DISBURSEMENT OF SALARY TO THE TAMIL TEACHERS IN SULLIA

769 SRI K. KUSHALA (Sullia).—Will the Minister of State for Primary and Adult Education will be pleased to state.

a) How many Tamil Teachers are working in Model Higher Primary School, Sullia Tq., D.K. District, and from which date they are working ?

b) Whether, the salary is being disubursed to them ?

c) If not, what are the reasons for it and when the salary will be sanctioned ?

SRI H. G. GOVINDEGOWDA Hon'ble Minister for Primary and Adult Education.—

a) Two.

b) They are working from 9-12-1972 and 22-10-1982 respectively.

e) Salary paid upto 30-11-1984.

d) In G.O. No.ED 217 PMC 82 dt. 8-8-85, orders have been issued continuing the said two posts temporarily till 28-2-1986 and to take immediate necessary action to disburse the salary.

ಶ್ರೀ ಕೆ. ಕುತಾಲ.—ಈ ಹುದ್ದೆಗಳನ್ನು ಖಾಯಂ ಮಾಡಲು ಸರ್ಕಾರದಲ್ಲಿರುವ ತೊಂದರೆ ಯಾದರೂ ಏನು ?

ಶ್ರೀ ಹೆಚ್. ಜಿ. ಗೋವಿಂದೇಗೌಡ —೨೮-೨-೮೬ ರವರೆಗೆ ತಾತ್ಕಾಲಿಕವಾಗಿ ಮುಂದುವರಿಸಿದೆ, ಮುಂದೆ ಅವರನ್ನು ಖಾಯಂ ಮಾಡುವುದರ ಬಗ್ಗೆ ಪರಿಶೀಲನೇ ಮಾಡಿ, ಖಾಯಂ ಮಾಡುತ್ತೇವೆ.

ಪ್ರಶ್ನೆ. ೯೧೦

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಹಾನು ೯೧೦ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಇನ್ನು ೫ ನಿಮಿಷಗಳಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆ.

ಪ್ರಶ್ನೆ ೧೨೧೬

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—(ಮಾನ್ಯ ಸದಸ್ಯರು ಹಾಜರಿರಲಿಲ್ಲ.)

ಶಿಕ್ಷಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸುವುದು.

೨೧೧. ಶ್ರೀ ವಸಂತ ಬಂಗೇರ (ಬೆಳ್ತಂಗಡಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ: ?

ಅ) ಸರಕಾರಿ ಹಾಗೂ ಖಾಸಗಿ ಶಾಲೆಗಳಿಗೆ ಸ್ಥಳೀಯ ಮತ್ತು ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸುವ ಯೋಜನೆ ಸರಕಾರಕ್ಕಿದೆಯೆಂ ?

ಶ್ರೀ ಎಂ, ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಶ್ರೀ ಎಂ. ರಘುಪತಿ.—ಅನುದಾನ ಪಡೆಯುವ ಖಾಸಗೀ ಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಈಗ ನೇಮಕ ಮಾಡುತ್ತಿದ್ದೇವೆ. ಇದಕ್ಕೆ ಸ್ಕೀಂ ಇದೆಯೇ ಎಂದು ಕೇಳಿದ್ದೀರಿ. ಸ್ಕೀಂ ಇಲ್ಲ. ಪ್ರಪೋಸಲ್ ಮಾತ್ರ ಆಗುತ್ತಿದೆ.

ಶ್ರೀ ಕೆ. ವಸಂತ ಬಂಗೇರ.—ಅಧ್ಯಾಪಕರ, ಉಪನ್ಯಾಸಕರ ಕೊರತೆಯಿಲ್ಲವೆಂದು ಹೇಳುತ್ತಿದ್ದೀರಿ ಕೊರತೆಯಿದ್ದರೆ, ಅದನ್ನು ಬೇರೆ ವಿಧಾನದಲ್ಲಿ ಭರ್ತಿ ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಎಲ್ಲೆಲ್ಲಿ ಕೊರತೆಯಿದೆಯೋ ಅಲ್ಲೆಲ್ಲಾ ಕಾಂಟ್ರಾಕ್ಟ್ ಆಧಾರದ ಮೇಲೆ ಲೆಕ್ಚರರ್ಸ್ ಮತ್ತು ಟೀಚರ್ಸ್ ಅನ್ನು ಅಪಾಯಿಂಟ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಆದರ ಪ್ರಕಾರ ನಡೆದಿದೆ.

ಶ್ರೀ ಕೆ. ವಸಂತ ಬಂಗೇರ.—ಕಾಂಟ್ರಾಕ್ಟ್ ಆಧಾರದ ಮೇಲೆ ಅಪಾಯಿಂಟ್ ಮಾಡಿ ಆರ್ಡರ್ ಅನ್ನು ಕಳಿಸಿದ್ದೇವೆ. ಅಪಾಯಿಂಟ್ ಮೆಂಟ್ ಆರ್ಡರ್ಸ್ ಟೀಚರ್ಸ್‌ಗೆ ಹೋಗಿದೆ. ಅವರೆಲ್ಲಾ ಬಂದು ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಬೇಕು. ರಿಪೋರ್ಟ್ ಮಾಡಿಕೊಳ್ಳದೇ ಹೋದರೆ, ಅಂತಹ ಸ್ಥಳಗಳನ್ನು ಭರ್ತಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಅಧ್ಯಕ್ಷರು.— ತಮ್ಮ ಪ್ರಶ್ನೆಗಳನ್ನು ಮುಂದೆ ಹಾಕಲಾಗಿದೆ.

ಶ್ರೀ ಎ. ಬಿ. ದೇಸಾಯಿ.—

ಶ್ರೀ ಪಿ. ಸಿ. ಸಿದ್ದನ ಗೌಡರ್.—